ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿ025521**
**(ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಸಂಖ್ಯೆ : ಕವಿಪ್ರನಿನಿ/ಬಿ5ಸಿ/84600/2018-19** **ದಿನಾಂಕ :** 08 MAR 2019
**ಲಗತ್ತು: 1 ಪುಟ.**

ಅಧೀಕ್ಷಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನಾ ವೃತ್ತ,
**ಬೆಸ್ಕಾಂ-** ಬೆಂಗಳೂರು (ದಕ್ಷಿಣ)/ರಾಮನಗರ/ ತುಮಕೂರು/ ದಾವಣಗೆರೆ/ ಕೋಲಾರ,
**ಸೆಸ್ಕ್-** ಮೈಸೂರು/ಮಂಡ್ಯ/ಹಾಸನ/ ಚಾಮರಾಜನಗರ-ಕೊಡುಗು
**ಮೆಸ್ಕಾಂ-** ಮಂಗಳೂರು/ ಉಡುಪಿ/ ಶಿವಮೊಗ್ಗ/ ಚಿಕ್ಕಮಗಳೂರು.
**ಹೆಸ್ಕಾಂ-** ಹುಬ್ಬಳ್ಳಿ/ ಹಾವೇರಿ/ ಶಿರಸಿ/ ಬೆಳಗಾವಿ/ ಚಿಕ್ಕೋಡಿ/ ವಿಜಯಪುರ/ ಬಾಗಲಕೋಟೆ.
**ಜೆಸ್ಕಾಂ-** ಗುಲ್ಬರ್ಗಾ/ಬೀದರ್/ರಾಯಚೂರು/ಬಳ್ಳಾರಿ/ಕೊಪ್ಪಳ.

ಮಾನ್ಯರೆ,

**ವಿಷಯ :** ಅನುಕಂಪ ಆಧಾರದ ನೇಮಕಾತಿಗೆ ಪರಿಷ್ಕೃತ ಮಾರ್ಗಸೂಚಿಯನ್ನು ರಚಿಸಲು ಮಾಹಿತಿ ಒದಗಿಸುವ ಬಗ್ಗೆ.

**ಉಲ್ಲೇಖ :** ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ)(ಪ್ರ), ಸಾರ್ವಜನಿಕ ಉದ್ದಿಮೆಗಳ ಇಲಾಖೆ ರವರ ಪತ್ರ ಸಂಖ್ಯೆ: ಸಾಉಇ 106 ಎಆರ್‌ಯು 2019, ದಿನಾಂಕ: 07.03.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅನುಕಂಪ ಆಧಾರದ ನೇಮಕಾತಿಗೆ ಪರಿಷ್ಕೃತ ಮಾರ್ಗಸೂಚಿಯನ್ನು ರಚಿಸಲು ಕೆಲವೊಂದು ಮಾಹಿತಿಯ ವಿವರಗಳನ್ನು ಒದಗಿಸುವಂತೆ ಉಲ್ಲೇಖದ ಪತ್ರದಲ್ಲಿ ಕೋರಲಾಗಿರುತ್ತದೆ. ನಿಗಮದ ದಿನಾಂಕ: 23.09.2011 ರ ಸುತ್ತೋಲೆಯಲ್ಲಿ ಅನುಕಂಪ ಆಧಾರದ ಮೇರೆಗೆ ನೇಮಕಾತಿ ಕೋರಿ ಸಲ್ಲಿಸುವ ಅರ್ಜಿಗಳನ್ನು ಪರಿಶೀಲಿಸಿ ನೇಮಕಾತಿ ನೀಡುವ ಅಧಿಕಾರವನ್ನು ಎಸ್ಕಾಂಗಳ ಕಾರ್ಯ ಮತ್ತು ಪಾಲನಾ ವೃತ್ತಗಳಿಗೆ ನೀಡಲಾಗಿರುತ್ತದೆ. ಆದುದರಿಂದ ಈ ಕೆಳಕಂಡ ಮಾಹಿತಿಗಳನ್ನು ನೇರವಾಗಿ ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ), ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ರವರಿಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

1) ಅನುಕಂಪ ಆಧಾರದ ಮೇಲೆ ನೇಮಕಾತಿಗಾಗಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು?
2) ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ವೃಂದದ ನೌಕರರುಗಳ/ಸಿಬ್ಬಂದಿಯ ಸಂಖ್ಯೆ (ನೇರ ನೇಮಕಾತಿಗಾಗಿ ಮಂಜೂರಾಗಿರುವ ಒಟ್ಟು ಹುದ್ದೆಗಳು) (ವೃಂದ ಬಲ)?
3) ಪ್ರಸ್ತುತ ಅನುಕಂಪದ ಆಧಾರದ ಮೇರೆಗೆ ಈಗಾಗಲೇ ಭರ್ತಿ ಮಾಡಲಾಗಿರುವ ಹುದ್ದೆಗಳ ಸಂಖ್ಯೆ/ಖಾಲಿ ಇರುವ ಹುದ್ದೆಗಳ ಸಂಖ್ಯೆಯ ವಿವರಗಳು.
4) ಅನುಕಂಪದ ಆಧಾರದ ಮೇರೆಗೆ ಯಾವುದಾದರೂ ಕಾರ್ಯನೀತಿ(ಪಾಲಿಸಿ) ನಿಯಮ/ ಸಲಹೆ/ಸೂಚನೆಗಳಿದ್ದಲ್ಲಿ ವಿವರಗಳನ್ನು ಒದಗಿಸುವುದು.

ನಿಮ್ಮ ವಿಶ್ವಾಸಿ,

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಪ್ರತಿಯನ್ನು :-
1. ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ)(ಪ್ರ), ಸಾರ್ವಜನಿಕ ಉದ್ದಿಮೆಗಳ ಇಲಾಖೆ, 7ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು.

2.ಎಲ್ಲಾ ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ), ಎಸ್ಕಾಂಗಳು.

5186

# ಕರ್ನಾಟಕ ಸರ್ಕಾರ

ಸಂಖ್ಯೆ:ಸಾಉಇ 106 ಎಆರ್‌ಯು 2019

ಕರ್ನಾಟಕ ಸರ್ಕಾರದ ಸಚಿವಾಲಯ,
7ನೇ ಮಹಡಿ, 2ನೇ ಗೇಟ್,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07-03-2019

**ಇಂದ,**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರ್ವಜನಿಕ ಉದ್ದಿಮೆಗಳ ಇಲಾಖೆ.

M. D.
11 MAR 2019
KPTCL

**ಇವರಿಗೆ,**

ವ್ಯವಸ್ಥಾಪಕ ನಿರ್ದೇಶಕರು,
ಎಲ್ಲ 60 ನಿಗಮ/ಮಂಡಳಿಗಳು.

**ಮಾನ್ಯರೆ,**

**ವಿಷಯ:** ಅನುಕಂಪದ ಆಧಾರದ ಮೇಲಿನ ನೇಮಕಾತಿ ಮಾರ್ಗಸೂಚಿಯ ರಚಿಸಲು ಮಾಹಿತಿ ಒದಗಿಸುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಕುರಿತು ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವ ಪೂರ್ವದಲ್ಲಿ ಕೆಳಕಂಡ ಮಾಹಿತಿ/ವಿವರಗಳನ್ನು ಜರೂರಾಗಿ ಒದಗಿಸುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

1) ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು?
2) ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಸರಿಸುತ್ತಿರುವ ವಿಧಾನ ನಿಯಮಾವಳಿಗಳ ವಿವರ ಒದಗಿಸುವುದು.
3) ತಮ್ಮ ಉದ್ದಿಮೆಯಲ್ಲಿ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ವೃಂದದ ನೌಕರರುಗಳು/ಸಿಬ್ಬಂದಿಯ ಸಂಖ್ಯೆ(ನೇರ ನೇಮಕಾತಿಗಾಗಿ ಮಂಜೂರಾಗಿರುವ ಒಟ್ಟು ಹುದ್ದೆಗಳು(ವೃಂದ ಬಲ)?
4) ಪ್ರಸ್ತುತ ಅನುಕಂಪದ ಆಧಾರದ ಮೇರೆಗೆ ಈಗಾಗಲೇ ಭರ್ತಿ ಮಾಡಲಾಗಿರುವ ಹುದ್ದೆಗಳ ಸಂಖ್ಯೆ/ಖಾಲಿ ಇರುವ ಹುದ್ದೆಗಳ ಸಂಖ್ಯೆಯ ವಿವರಗಳು
5) ತಮ್ಮ ಉದ್ದಿಮೆಯಲ್ಲಿ ಅನುಕಂಪದ ಆಧಾರದ ಮೇರೆಗೆ ಯಾವುದಾದರೂ ಕಾರ್ಯನೀತಿ(ಪಾಲಿಸಿ) ನಿಯಮ/ಸಲಹೆ/ಸೂಚನೆಗಳಿದ್ದಲ್ಲಿ ವಿವರಗಳನ್ನು ಒದಗಿಸುವುದು.

ತಮ್ಮ ವಿಶ್ವಾಸಿ,

(ಬಿ.ಜಯಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ)(ಪ್ರ)
ಸಾರ್ವಜನಿಕ ಉದ್ದಿಮೆಗಳ ಇಲಾಖೆ